# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 695 |
| ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.12.2024 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಮೊಬೈಲ್ ಟವರ್‌ಗಳಿವೆ; ಅವು ಯಾವ ಯಾವ ಕಂಪನಿಗಳಿಗೆ ಸೇರಿವೆ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು) | ರಾಜ್ಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ 14,299 ಮೊಬೈಲ್ ಟವರ್ ಗಳಿವೆ.<br>ಈ ಮೊಬೈಲ್ ಟವರ್‌ಗಳು BSNL, Indus Tower, Jio, Airtel, Atc, Tata. Reliance, Sumit Digital, Sumit Infra, Vodafone, Docomo ಕಂಪನಿಗಳಿಗೆ ಸೇರಿವೆ.<br>ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಈ ಮೊಬೈಲ್ ಟವರ್‌ಗಳಿಂದ ತೆರಿಗೆ ರೂಪದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬರುವ ಆದಾಯ ಎಷ್ಟು; ಹಾಗೂ ಯಾವ ಮಾನದಂಡಗಳ ಆಧಾರದ ಮೇಲೆ ತೆರಿಗೆಯನ್ನು ವಿಧಿಸಲಾಗುತ್ತಿದೆ; ತೆರಿಗೆಗೆ ಉಪಕರಣಗಳನ್ನು ಸೇರಿಸಲಾಗುತ್ತಿದೆಯೇ; ಸೇರಿಸದಿದ್ದಲ್ಲಿ ಕಾರಣಗಳೇನು (ವಿವರ ನೀಡುವುದು) | ಮೊಬೈಲ್ ಟವರ್‌ಗಳಿಂದ ತೆರಿಗೆ ರೂಪದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬರುವ ಆದಾಯದ ವಿವರವನ್ನು ಅನುಬಂಧದಲ್ಲಿ ನೀಡಿದೆ.<br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 199 ಮತ್ತು ಅನುಸೂಚಿ IV ರಂತೆ ತೆರಿಗೆ ವಿಧಿಸಲಾಗುತ್ತಿದೆ.<br>ಕರ್ನಾಟಕ ಭಿಕ್ಷಾಟನೆ ನಿಷೇಧ ಕಾಯ್ದೆ 1975, ಕರ್ನಾಟಕ ಆರೋಗ್ಯ ಸೆಸ್ ಕಾಯ್ದೆ 1962, ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965 ರನ್ವಯ ಕಟ್ಟಡ ಮತ್ತು ನಿವೇಶನಗಳ ಮೇಲೆ ವಿಧಿಸಲಾಗುವ ತೆರಿಗೆಗಳಿಗೆ ಉಪಕರಗಳೊಂದಿಗೆ ಸಂಗ್ರಹಿಸಲು ಅವಕಾಶವಿದ್ದು, ಮೊಬೈಲ್ ಟವರ್ ತೆರಿಗೆ ಮೇಲೆ ಉಪಕರಗಳನ್ನು ವಿಧಿಸಲು ಅವಕಾಶವಿರುವುದಿಲ್ಲ. |
| (ಇ) | ಮೊಬೈಲ್ ಟವರ್‌ಗಳ ನಿಯಂತ್ರಣಕ್ಕೆ ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಅಧಿನಿಯಮದಲ್ಲಿ ಅವಕಾಶವಿದೆಯೇ; ಅದಕ್ಕೆ ಸಂಬಂಧಿಸಿದಂತೆ ಕರಡು ನೀತಿಯನ್ನು ಯಾವಾಗ ಪ್ರಕಟಿಸಲಾಗಿದೆ; ಪ್ರಕಟಿಸದಿದ್ದಲ್ಲಿ ಕಾರಣಗಳೇನು; | ಮೊಬೈಲ್ ಟವರ್‌ಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ The Karnataka Gram Swaraj and Panchayat Raj (Grampanchayt) (Telecommunication Infrastructure Tower and Overground Cable or Underground Optical Fiber Cable Infrastructure) Bye-Laws, 2021 ಅನ್ನು ರಚಿಸಲಾಗಿದೆ. |

| | | |
|---|---|---|
| (ಈ) | 2015 ರಿಂದ ಇಲ್ಲಿಯವರೆಗೆ ಮೊಬೈಲ್ ಟವರ್‌ಗಳಿಂದ ಗ್ರಾಮ ಪಂಚಾಯಿತಿಗಳಿಗೆ ಬರಬೇಕಾದ ಬಾಕಿ ಎಷ್ಟು; ಬಾಕಿ ಇರಲು ಕಾರಣಗಳೇನು; ಹಾಗೂ ವಸೂಲಿ ಮಾಡಲು ಇಲಾಖೆ ಕೈಗೊಂಡಿರುವ ಕ್ರಮಗಳಾವುವು; ಮಾಹಿತಿ ನೀಡುವುದು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | 2015 ರಿಂದ ಇಲ್ಲಿಯವರೆಗೆ ಮೊಬೈಲ್ ಟವರ್‌ಗಳಿಂದ ಗ್ರಾಮ ಪಂಚಾಯಿತಿಗಳಿಗೆ ಬರಬೇಕಾದ ಬಾಕಿ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.<br><br>ಮೊಬೈಲ್ ಟವರ್‌ಗಳಿಂದ ಬಾಕಿ ವಸೂಲಿ ಮಾಡಲು ತೆರಿಗೆದಾರರಿಗೆ ನೋಟಿಸ್ ನೀಡಲಾಗಿದೆ. |
| (ಉ) | ರಾಜ್ಯಾದ್ಯಂತ ಮೊಬೈಲ್ ಟವರ್‌ಗಳ ಏಕರೂಪ ತೆರಿಗೆಯನ್ನು ಸಂಗ್ರಹಿಸಲು ಇಲಾಖೆ ಕೈಗೊಂಡಿರುವ ಕ್ರಮಗಳೇನು? | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ಮತ್ತು ಅನುಸೂಚಿ-IV ರಂತೆ ವಾರ್ಷಿಕವಾಗಿ ಪ್ರತಿ ಟವರಿನ ಮೇಲೆ ರೂ. 12,000/- ತೆರಿಗೆ ವಿಧಿಸಲಾಗುತ್ತಿದೆ. |

ಸಂಖ್ಯೆ: ಗ್ರಾಅಪ 666 ಗ್ರಾಪಂಅ 2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ಅನುಬಂಧ

| ಕ್ರ.ಸಂ. | ಜಿಲ್ಲೆಯ ಹೆಸರು | ಒಟ್ಟು ಮೊಬೈಲ್ ಟವರ್ ಗಳ ಸಂಖ್ಯೆ | ಯಾವ ಯಾವ ಕಂಪನಿಗಳಿಗೆ ಸೇರಿವೆ | 2015 ರಿಂದ ಇಲ್ಲಿಯವರೆಗೆ ಬರಬೇಕಾದ ಬಾಕಿ ವಿವರ | ಮೊಬೈಲ್ ಟವರ್ ಗಳಿಂದ ಸಂಗ್ರಹವಾದ ತೆರಿಗೆ |
|---|---|---|---|---|---|
| 1 | ಬಾಗಲಕೋಟೆ | 474 | BSNL, Indus Tower, Jio, Airtel, Atc,Tata,Reliance,Sumit Digital,Sumit Infra,Vodafone,Docomo | 9148000 | 5688000 |
| 2 | ಬಳ್ಳಾರಿ | 268 | | 8019000 | 3348000 |
| 3 | ಬೆಂಗಳೂರು(ನ) | 438 | | 700000 | 386000 |
| 4 | ಬೆಂಗಳೂರು(ಗ್ರಾ) | 328 | | 8436000 | 4512000 |
| 5 | ಬೆಳಗಾವಿ | 1063 | | 35077996 | 19991000 |
| 6 | ಬೀದರ್ | 517 | | 2802500 | 5583600 |
| 7 | ಚಾಮರಾಜನಗರ | 256 | | 1381000 | 2095800 |
| 8 | ಚಿಕ್ಕಬಳ್ಳಾಪುರ | 339 | | 15635840 | 4566000 |
| 9 | ಚಿಕ್ಕಮಗಳೂರು | 434 | | 17420278 | 5208000 |
| 10 | ಚಿತ್ರದುರ್ಗ | 436 | | 5154774 | 3629774 |
| 11 | ದಕ್ಷಿಣ ಕನ್ನಡ | 679 | | 14368940 | 7852940 |
| 12 | ದಾವಣಗೆರೆ | 438 | | 8810546 | 4668960 |
| 13 | ಧಾರವಾಡ | 309 | | 7298300 | 1560000 |
| 14 | ಗದಗ | 225 | | 2834186 | 2700000 |
| 15 | ಹಾಸನ | 618 | | 14659660 | 7169200 |
| 16 | ಹಾವೇರಿ | 472 | | 14334980 | 6082000 |
| 17 | ಕಲಬುರಗಿ | 683 | | 54247180 | 21658820 |
| 18 | ಕೊಡಗು | 242 | | 2596950 | 3426000 |
| 19 | ಕೋಲಾರ | 412 | | 14903980 | 5599640 |
| 20 | ಕೊಪ್ಪಳ | 436 | | 10818282 | 5030200 |
| 21 | ಮಂಡ್ಯ | 600 | | 10881000 | 7721000 |
| 22 | ಮೈಸೂರು | 889 | | 23152452 | 11619408 |
| 23 | ರಾಯಚೂರು | 468 | | 11667000 | 6414000 |
| 24 | ರಾಮನಗರ | 338 | | 16516327 | 5295063 |
| 25 | ಶಿವಮೊಗ್ಗ | 543 | | 7322300 | 23131480 |
| 26 | ತುಮಕೂರು | 353 | | 27732781 | 8715748 |
| 27 | ಉಡುಪಿ | 507 | | 23030090 | 38506430 |
| 28 | ಉತ್ತರ ಕನ್ನಡ | 345 | | 4128003 | 2672000 |
| 29 | ವಿಜಯಪುರ | 545 | | 15193200 | 6577200 |
| 30 | ವಿಜಯನಗರ | 361 | | 10244000 | 4142000 |
| 31 | ಯಾದಗಿರಿ | 283 | | 16564200 | 4236000 |
| | ಒಟ್ಟು | **14299** | | **414379745** | **236728263** |